**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 23.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 3 ನೇ ಎದುರುದಾರರ ಪರ ಶ್ರೀಮತಿ ಎ ಎಸ್ ಕೆ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ಕೆಎ-25/ ಇಆರ್-2913 ಈ ವಾಹನ ಸ್ಕೂಟಿಯಾಗಿರುತ್ತದೆ. ದಿಃ29/01/2022 ರಂದು ಅಪಘಾತವಾಯಿತು ಎಂದು ಹೇಳಿದ ಸವಯದಲ್ಲಿ ಸದರಿ ಸ್ಕೂಟಿಯನ್ನು ನಾನೇ ಚಲಾಯಿಸುತ್ತಿದ್ದೆ ಎಂದರೆ ಸರಿ. ಸದರಿ ಸ್ಕೂಟಿ ನನ್ನ ಹೆಸರಿನಲ್ಲಿ ನೊಂದಣಿಯಾಗಿದೆ ಎಂದರೆ ಸರಿ. ಸದರಿ ವಾಹನಕ್ಕೆ ಪಾಲಿಸಿ ಕೂಡ ಇದೆ ಎಂದರೆ ಸರಿ. ಪಾಲಿಸಿ ನೀಡಿದವರು National Insurance company ಯವರು ಆಗಿದ್ದು ಅವರು ನನ್ನ ಹೆಸರಿನಲ್ಲಿಯೇ ಕೊಟ್ಟಿರುತ್ತಾರೆ ಎಂದರೆ ಸರಿ. ಅಪಘಾತದಲ್ಲಿ ನನ್ನದು ಕೂಡ ತಪ್ಪಿದೆ ಎಂದು ನನ್ನ ಮೇಲೆಯೂ ದೋಷಾರೋಪಣೆಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿ. ನನಗೆ ಕೊಟ್ಟಿರುವ ಪಾಲಿಸಿ ಪ್ರಕಾರ ನನಗೆ 3 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸಾಕ್ಷಿ ಅದು ಸರಿಯಲ್ಲ ಎನ್ನುತ್ತಾರೆ. ಸದರಿ ಗಾಡಿಯ ವಾಹನದ ಮಾಲೀಕರು ನಾನೇ ಆಗಿದ್ದು ಹಾಗೂ ಪಾಲಿಸಿ ಕೂಡ ನನ್ನ ಹೆಸರಿನಲ್ಲಿಯೇ ಇರುವ ಕಾರಣ 3 ನೇ ಎದುರುದಾರರು ನನಗೆ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನನಗೆ 3.5 ಲಕ್ಷ ಖರ್ಚಾಗಿದೆ ಮತ್ತು ನನಗೆ ಯಾವುದೇ ರೀತಿಯ ವರಮಾನ ಇಲ್ಲ ಎಂದು ಪರಿಹಾರ ಕೇಳಿದ್ದು ಅದನ್ನು ಕೊಡಲು 3 ನೇ ಎದುರುದಾರರು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**